# ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 181 ಎಲ್ಇಟಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:15.07.2021.

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ,
ವಿಕಾಸಸೌಧ, ಬೆಂಗಳೂರು.

ಇವರಿಗೆ:

ಆಯುಕ್ತರು,
ಕಾರ್ಮಿಕ ಇಲಾಖೆ,
ಕಾರ್ಮಿಕ ಭವನ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು

ಮಾನ್ಯರೆ,

ವಿಷಯ: 2021-22ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿಯು ಜಾರಿಗೊಳಿಸುತ್ತಿರುವ ಆಶಾದೀಪ ಯೋಜನೆಯ ಕರಡು ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: ತಮ್ಮ ಪ್ರಸ್ತಾವನೆ ಸಂಖ್ಯೆ: ಆಯೋಸೊ/ಆಯವ್ಯಯ/ಸಿಆರ್-05/2021-22, ದಿನಾಂಕ:21.04.2021.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021-22ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿಯು ಜಾರಿಗೊಳಿಸುತ್ತಿರುವ ಆಶಾದೀಪ ಯೋಜನೆಗೆ ಹಂಚಿಕೆಯಾದ ಅನುದಾನ ಹಾಗೂ ಹಿಂದಿನ ಸಾಲುಗಳಲ್ಲಿ ಬಾಕಿ ಉಳಿದಿರುವ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದನೆಗಾಗಿ ಉಲ್ಲೇಖಿತ ಪ್ರಸ್ತಾವನೆಯಲ್ಲಿ ಕೋರಿರುತ್ತೀರಿ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡ ಷರತ್ತಿಗೊಳಪಟ್ಟು ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

- ಪ್ರಸ್ತಾಪಿತ ಕ್ರಿಯಾ ಯೋಜನೆಯು ಆಯವ್ಯಯದ ಮಿತಿಯನ್ನು ಮೀರಬಾರದು.
- ಯೋಜನೆಯ ಪ್ರಗತಿಯ ವರದಿಯನ್ನು ತಪ್ಪದೇ ಪ್ರತಿ ತಿಂಗಳು ಸಲ್ಲಿಸಬೇಕು.
- ಕ್ರಿಯಾ ಯೋಜನೆಯಲ್ಲಿ ಏನಾದರು ಬದಲಾವಣೆಗಳನ್ನು ಮಾಡುವುದಾದಲ್ಲಿ ಕಡ್ಡಾಯವಾಗಿ ಸರ್ಕಾರದ ಪೂರ್ವಾನುಮತಿಯನ್ನು ಪಡೆಯಬೇಕು.
- ಯೋಜನೆಗಳನ್ನು ಕೈಗೊಳ್ಳುವಾಗ ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದಿದ್ದಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ, 2000ರ ನಿಯಮಗಳಿಗನುಸಾರವಾಗಿ ಕೈಗೊಳ್ಳತಕ್ಕದ್ದು.

...2

- ಆಯವ್ಯಯಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯು ಹೊರಡಿಸಿರುವ ಆಯವ್ಯಯ ಸಲಹಾ ಟಿಪ್ಪಣಿ ಸಂಖ್ಯೆ: ಆಇ 91 ವೆಚ್ಚ-9/2021, ದಿನಾಂಕ:09.04.2021ನ್ನು ಹಾಗೂ ಆರ್ಥಿಕ ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ಟಿಪ್ಪಣಿಗಳಿಗೆ ಅನುಗುಣವಾಗಿ ಕ್ರಿಯಾ ಯೋಜನೆಯು ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಆರ್ಥಿಕ ಇಲಾಖೆಯು ಹೊರಡಿಸುವ ಅಧಿಕಾರ ಪ್ರತ್ಯಾಯೋಜನೆಗನುಸಾರವಾಗಿ ಕ್ರಿಯಾ ಯೋಜನೆಯ ಅನುಷ್ಠಾನವನ್ನು ಕೈಗೊಳ್ಳತಕ್ಕದ್ದು.

(ಮಾನ್ಯ ಇಲಾಖಾ ಸಚಿವರಿಂದ ಅನುಮೋದಿಸಲ್ಪಟ್ಟಿದೆ)

ತಮ್ಮ ನಂಬುಗೆಯ,

(ಸಂಧ್ಯಾ. ಎಲ್. ನಾಯಕ್)
ಸರ್ಕಾರದ ಉಪ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

ಪ್ರತಿಯನ್ನು:

1. ಮಾನ್ಯ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ(ಆಶಾದೀಪ ಯೋಜನೆ)ಸೊಸೈಟಿ,

ಸದಸ್ಯ ಕಾರ್ಯದರ್ಶಿಯವರ ಕಛೇರಿ, 3ನೇ ಮಹಡಿ, ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರ-29
ದೂ: 080-29759983/8883, ಇ-ಮೇಲ್: ashadeepa29@gmail.com, ವೆಬ್‌ಸೈಟ್: www.ashadeepa.in

ಸಂಖ್ಯೆ: ಆಯೋಸೊ/ಆಯವ್ಯಯ/ಸಿಆರ್-05/2021-22 ದಿನಾಂಕ:21-04-2021

ಇವರಿಗೆ,
ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಕಾರ್ಮಿಕ ಇಲಾಖೆ, ವಿಕಾಸ ಸೌಧ,
ಬೆಂಗಳೂರು.

KARNATAKA GOVERNMENT ... No. ... Date ... 3/5/21

ಮಾನ್ಯರೇ,

**ವಿಷಯ :-** ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿಯು ಜಾರಿಗೊಳಿಸುತ್ತಿರುವ ಆಶಾದೀಪ ಯೋಜನೆಯ ಲೆಕ್ಕ ಶೀರ್ಷಿಕೆ 2230-01-101-0-05(059)ರಡಿ 2021-22ನೇ ಸಾಲಿನಲ್ಲಿ ಹಂಚಿಕೆಯಾದ ಹಾಗೂ ಹಿಂದಿನ ಸಾಲುಗಳಲ್ಲಿ ಬಾಕಿ ಉಳಿದ ಅನುದಾನವನ್ನು ಬಳಸಿಕೊಂಡು ಯೋಜನೆಯನ್ನು ಮುಂದುವರೆಸುವ ಕುರಿತು ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:-** ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ: 09-04-2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿಯು ಜಾರಿಗೊಳಿಸುತ್ತಿರುವ ಆಶಾದೀಪ ಯೋಜನೆಯನ್ನು ಪ್ರಸ್ತುತ ಸಾಲಿನಲ್ಲಿ ಮುಂದುವರೆಸುವ ಕುರಿತಂತೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಉಲ್ಲೇಖ (1)ರನ್ವಯ, ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ದಿನಾಂಕ: 20-04-2021ರಂದು ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಸಮ್ಮುಖದಲ್ಲಿ ಕ್ರಿಯಾ ಯೋಜನೆಗಳ ಕುರಿತಾಗಿ ನಡೆದ ಸಭೆಯಲ್ಲಿ ಸೂಚಿಸಿದಂತೆ, ಪರಿಷ್ಕೃತ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದ್ದು, ಸದರಿ ಕ್ರಿಯಾ ಯೋಜನೆಗೆ ಸೊಸೈಟಿಯ ವ್ಯವಸ್ಥಾಪನಾ ಸಮಿತಿ ಹಾಗೂ ಆಡಳಿತ ಸಮಿತಿಯ ಸಭೆಗಳ ಮುಂದೆ ಮಂಡಿಸಿ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು, ಕ್ರಿಯಾ ಯೋಜನೆಯ ಜಾರಿಗಾಗಿ ಅನುಮತಿಯನ್ನು ನೀಡುವಂತೆ ಈ ಮೂಲಕ ತಮ್ಮನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ,

S. K.

ಜಂಟಿ ಕಾರ್ಮಿಕ ಆಯುಕ್ತರು ಹಾಗೂ
ಸದಸ್ಯ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು
ಸಾಮಾಜಿಕ ಭದ್ರತಾ(ಆಶಾದೀಪ ಯೋಜನೆ) ಸೊಸೈಟಿ.
ಬೆಂಗಳೂರು.

ಆಯುಕ್ತರವರ ಕಛೇರಿ ... 21/04/21

ಪ್ರತಿಯನ್ನು ಮಾಹಿತಿಗಾಗಿ:-
ಆಯುಕ್ತರು, ಕಾರ್ಮಿಕ ಇಲಾಖೆ, ಬೆಂಗಳೂರು.

# ಆಶಾದೀಪ ಯೋಜನೆಯ ಅನುಷ್ಠಾನಕ್ಕಾಗಿ 2021–22ನೇ ಸಾಲಿನ ಪರಿಷ್ಕೃತ ಕ್ರಿಯಾ ಯೋಜನೆ

ಖಾಸಗಿ ವಲಯದ ಕಾರ್ಖಾನೆಗಳು ಹಾಗೂ ಉದ್ದಿಮೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ನೇಮಕಾತಿಯನ್ನು ಉತ್ತೇಜಿಸುವ ಉದ್ದೇಶದಿಂದ, ಕರ್ನಾಟಕ ರಾಜ್ಯ ಸರ್ಕಾರವು 2017–18ನೇ ಸಾಲಿನಿಂದ ಆಶಾದೀಪ ಯೋಜನೆಯನ್ನು ಜಾರಿಗೆ ತಂದಿದ್ದು, ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿ(ರಿ)ಯ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

(1) ಮಾಲೀಕರು ಪಾವತಿಸುವ ಇ.ಎಸ್.ಐ. ಮತ್ತು ಇ.ಪಿ.ಎಫ್ ವಂತಿಕೆ ಗರಿಷ್ಠ ರೂ.3000/–ಗಳ ಮಿತಿಯೊಳಗೆ ಮರುಪಾವತಿ. (ಎರಡು ವರ್ಷಗಳ ಅವಧಿಗೆ)

(2) ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ಶಿಷ್ಯವೇತನ (Stipend) 2/3 ರಷ್ಟು ಮೊತ್ತವನ್ನು ಮಾಸಿಕ ತಲಾ ರೂ.5000/– ಗಳ ಮಿತಿಯೊಳಗೆ ಮರು ಪಾವತಿಸುವುದು. (ಒಂದು ವರ್ಷ ಅವಧಿಯ ಸಾಮಾನ್ಯ ಹಾಗೂ ಎರಡು ವರ್ಷಗಳ ಅವಧಿಯ ಸಮಗ್ರ)

(3) ಅಪ್ರೆಂಟಿಸ್ ತರಬೇತಿ ನಂತರ ಅದೇ ಅಭ್ಯರ್ಥಿಗಳನ್ನು ಖಾಯಂ ಆಗಿ ನೇಮಕ ಮಾಡಿಕೊಂಡಲ್ಲಿ, ಸರ್ಕಾರವು ನಿಗದಿಪಡಿಸಿದ ಕನಿಷ್ಠ ವೇತನದ ಶೇ.50 ರಷ್ಟು ಮೊತ್ತ ಅಥವಾ ಗರಿಷ್ಠ ತಲಾ ರೂ. 7000/–ಗಳ ಮಿತಿಯೊಳಗೆ ವೇತನ ಮರುಪಾವತಿ.

**(01) ಮಾಲೀಕರು ಪಾವತಿಸುವ ಇ.ಎಸ್.ಐ. ಮತ್ತು ಇ.ಪಿ.ಎಫ್ ವಂತಿಕೆ ಮರುಪಾವತಿ:–**

ಸದರಿ ಸೌಲಭ್ಯದಡಿ ಹೊಸದಾಗಿ ಉದ್ಯೋಗ ಪಡೆಯುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ 150 ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ಮಾಲೀಕರು ಪಾವತಿಸಿದ ಇ.ಎಸ್.ಐ. ಮತ್ತು ಇ.ಪಿ.ಎಫ್. ವಂತಿಗೆಯನ್ನು ಮಾಸಿಕ ಗರಿಷ್ಠ ತಲಾ ರೂ.3000/–ಗಳ ಮಿತಿಯೊಳಗೆ ಮಾಲೀಕರಿಗೆ ಮರುಪಾವತಿಸಬೇಕಾಗಿದೆ. ಇದಲ್ಲದೆ, ಯೋಜನೆಯಡಿ ಸದರಿ ಸೌಲಭ್ಯವನ್ನು ಈಗಾಗಲೇ ನೀಡುತ್ತಿದ್ದು, ಈ ಸೌಲಭ್ಯಗದ ಅವಧಿಯು ಎರಡು ವರ್ಷಗಳಾಗಿದ್ದು, 2020–21ನೇ ಸಾಲಿನಲ್ಲಿ ನೇಮಕಗೊಂಡವರಿಗೂ ಪ್ರಸಕ್ತ ವರ್ಷದಲ್ಲಿ ಮುಂದುವರಿಸಬೇಕಾಗಿದ್ದು, ಇದರ ಜೊತೆಗೆ ಪ್ರಸಕ್ತ ಸಾಲಿನಲ್ಲಿ ಹೊಸದಾಗಿ ನೇಮಕಗೊಂಡ ಅಭ್ಯರ್ಥಿಗಳಿಗೂ ಸೇರಿದಂತೆ ಈ ಕೆಳಕೆಂಡಂತೆ ಅನುದಾನವನ್ನು ವ್ಯಯಿಸಲು ಉದ್ದೇಶಿಸಿದೆ.

| ಇಎಸ್ಐ ಮತ್ತು ಪಿಎಫ್ ಮಾಸಿಕ ವಂತಿಗೆ (ರೂ.ಗಳಲ್ಲಿ) | 12 ತಿಂಗಳುಗಳಿಗೆ ಪ್ರತಿ ಅಭ್ಯರ್ಥಿಗೆ ನೀಡಬೇಕಾಗಿರುವ ಇಎಸ್ಐ ಮತ್ತು ಪಿಎಫ್ ಮಾಸಿಕ ವಂತಿಗೆ (ರೂ.ಗಳಲ್ಲಿ) | 150 ಅಭ್ಯರ್ಥಿಗಳು (ಈಗಾಗಲೇ ಸೌಲಭ್ಯ ಪಡೆಯುತ್ತಿರುವ ಅಭ್ಯರ್ಥಿಗಳು ಸೇರಿದಂತೆ) |
|---|---|---|
| ರೂ.3000 | ರೂ.36,000 | ರೂ.54.00 ಲಕ್ಷಗಳು |

**(02) ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ಶಿಷ್ಯವೇತನ(Stipend) ಮೊತ್ತ ಮರು ಪಾವತಿಸುವುದು:–**

ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಅಪ್ರೆಂಟಿಸ್ ಕಾಯ್ದೆ 1961 ರನ್ವಯ ಒಂದು ವರ್ಷದ ಅವಧಿಯ ಸಾಮಾನ್ಯ (Normal) ಹಾಗೂ ಎರಡು ವರ್ಷಗಳ ಅವಧಿಯ ಸಮಗ್ರ (Comprehensive) ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾಲೀಕರು ಮಾಹೆಯಾನ ಪಾವತಿಸಿದ ಒಟ್ಟು ಶಿಷ್ಯವೇತನದಲ್ಲಿ 2/3 ರಷ್ಟು ಮೊತ್ತವನ್ನು ಗರಿಷ್ಠ ಮಾಸಿಕ ತಲಾ

ರೂ.5,000/- ಗಳ ಮಿತಿಯೊಳಗೆ ಮಾಲೀಕರಿಗೆ ಮರುಪಾವತಿಸುವುದು. ಈ ಸೌಲಭ್ಯವನ್ನು 2020-21ನೇ ಸಾಲಿನಿಂದ ನೀಡಲಾಗುತ್ತಿದ್ದು, ಈಗಾಗಲೇ ಸೌಲಭ್ಯ ಪಡೆದುಕೊಳ್ಳುತ್ತಿರುವ ಸಮಗ್ರ (Comprehensive) ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ಮುಂದುವರಿಸುವುದರ ಜೊತೆಗೆ ಹೊಸದಾಗಿ ಸೇರ್ಪಡೆಯಾಗುತ್ತಿರುವ ಅಭ್ಯರ್ಥಿಗಳು ಸೇರಿದಂತೆ ಅನುದಾನವನ್ನು ಈಕೆಳಕಂಡಂತೆ ವ್ಯಯಿಸಲು ಉದ್ದೇಶಿಸಿದೆ.

| ಮರುಪಾವತಿಸುವ ಮಾಸಿಕ ವೇತನ (ರೂ.ಗಳಲ್ಲಿ) | 12 ತಿಂಗಳುಗಳಿಗೆ ಮರುಪಾವತಿಸುವ ವೇತನ (ರೂ.ಗಳಲ್ಲಿ) | 220 ಅಪ್ರೆಂಟಿಸ್‌ಗಳು (ಈಗಾಗಲೇ ಸೌಲಭ್ಯ ಪಡೆಯುತ್ತಿರುವ ಅಭ್ಯರ್ಥಿಗಳು ಸೇರಿದಂತೆ) |
|---|---|---|
| ರೂ.5,000 | ರೂ.60,000 | ರೂ. 132.00 ಲಕ್ಷಗಳು |

**(03) <u>ಅಪ್ರೆಂಟಿಸ್ ತರಬೇತಿ ನಂತರ ಅದೇ ಅಭ್ಯರ್ಥಿಗಳನ್ನು ಖಾಯಂ ಆಗಿ ನೇಮಕ ಮಾಡಿಕೊಂಡಲ್ಲಿ ವೇತನ ಮರುಪಾವತಿ:-</u>**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಅಪ್ರೆಂಟಿಸ್ ತರಬೇತಿ ಪಡೆದವರನ್ನು, ತರಬೇತಿ ನಂತರ ಅದೇ ಮಾಲೀಕರು ಖಾಯಂ ಆಗಿ ನೇಮಕಾತಿ ಮಾಡಿಕೊಂಡಲ್ಲಿ, ಸರ್ಕಾರವು ನಿಗಧಿಪಡಿಸಿದ ಕನಿಷ್ಠ ವೇತನದ ಶೇ.50 ರಷ್ಟು ಮೊತ್ತವನ್ನು, ಮಾಸಿಕ ರೂ. ರೂ.6,500/- ರಿಂದ ರೂ. 7,000/- ಗಳ ಮಿತಿಯೊಳಗೆ ಒಂದು ವರ್ಷ ಅವಧಿಗೆ ಮಾಲೀಕರಿಗೆ ಮರುಪಾವತಿಸುವುದು.

| ನೀಡಲಾಗುವ ಮಾಸಿಕ ಮರು ಪಾವತಿ ಮೊತ್ತ (ರೂ.ಗಳಲ್ಲಿ) | 12 ತಿಂಗಳುಗಳಿಗೆ ಪ್ರತಿ ಅಭ್ಯರ್ಥಿಗೆ ನೀಡಬೇಕಾಗಿರುವ ಮರು ಪಾವತಿ ಮೊತ್ತ (ರೂ.ಗಳಲ್ಲಿ) | 15 ಅಭ್ಯರ್ಥಿಗಳಿಗೆ |
|---|---|---|
| ರೂ.7,000 | ರೂ.84,000 | ರೂ.12.60 ಲಕ್ಷಗಳು |

**(04) <u>ತಂತ್ರಾಂಶ ಅಭಿವೃದ್ಧಿ ಹಾಗೂ ಸಾಮಾಜಿಕ ಜಾಲತಾಣ ನಿರ್ವಹಣೆ:-</u>**

ಆಶಾದೀಪ ಯೋಜನೆಯ ಸಮರ್ಪಕ ಜಾರಿಗಾಗಿ ಮಾಲೀಕರಿಂದ ಅರ್ಜಿಸ್ವೀಕರಣೆ, ಪರಿಶೀಲನೆ, ಅನುಮೋದನೆ ಹಾಗೂ ಸೌಲಭ್ಯಗಳ ವಿತರಣೆ ಮುಂತಾದ ವ್ಯವಹಾರಗಳನ್ನು ಆನ್‌ಲೈನ್ ಮೂಲಕ ನಡೆಸುವ ಸದುದ್ದೇಶದಿಂದ ಪ್ರತ್ಯೇಕ ತಂತ್ರಾಂಶವನ್ನು ಅಭಿವೃದ್ಧಿಪಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಸದರಿ ತಂತ್ರಾಂಶದ ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ ಅವಶ್ಯವಿರುವ ರೂ.40.00 ಲಕ್ಷಗಳನ್ನು ವಿನಿಯೋಗಿಸಲು ಉದ್ದೇಶಿಸಲಾಗಿದೆ.

**(05) <u>ಮಾಹಿತಿ, ಶಿಕ್ಷಣ ಹಾಗೂ ಸಂವಹನಾ ಚಟುವಟಿಕೆಗಳು:-</u>**

ಯೋಜನೆಯ ಸಮರ್ಪಕ ಅನುಷ್ಠಾನಕ್ಕಾಗಿ ಲಭ್ಯವಿರುವ ಎಲ್ಲಾ ರೀತಿಯ ಪ್ರಚಾರ ಮಾಧ್ಯಮಗಳಾದ ಭಿತ್ತಿ ಪತ್ರಗಳ ಮುದ್ರಣ, ದೃಶ್ಯ ಮತ್ತು ವಿದ್ಯುನ್ಮಾನ ಮಾಧ್ಯಮ, ದಿನಪತ್ರಿಕೆಗಳಲ್ಲಿ ಜಾಹೀರಾತು ಒಳಗೊಂಡಂತೆ, ಸಂವಹನ ಚಟುವಟಿಕೆಗಳಿಗಾಗಿ ರೂ. 42.44 ಲಕ್ಷಗಳನ್ನು ವಿನಿಯೋಗಿಸಲು ಉದ್ದೇಶಿಸಲಾಗಿದೆ.

**(06) <u>ಮಹಿಳಾ ಅಭ್ಯರ್ಥಿಗಳಿಗೆ ವಿವಿಧ ಉದ್ಯೋಗಗಳ ಕುರಿತು ಮಾಹಿತಿ ಮತ್ತು ತರಬೇತಿ:-</u>**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿಗಳಿಗೆ ಸೂಕ್ತ ಉದ್ಯೋಗ ಒದಗಿಸಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ, ಪ್ರಸ್ತುತ ಬೇಡಿಕೆ ಇರುವ ಉದ್ಯೋಗಗಳ ಕುರಿತಾದ ಕೌಶಲ್ಯಗಳ ಬಗ್ಗೆ ಅರಿವು ಮೂಡಿಸಿ ಕೌಶಲ್ಯಾಭಿವೃದ್ಧಿ ಇಲಾಖೆಯ

ಸಹಕಾರದೊಂದಿಗೆ ಸೂಕ್ತ ಕೌಶಲ್ಯ ತರಬೇತಿ ನೀಡಿ ಉದ್ಯೋಗಕ್ಕೆ ಸಜ್ಜುಗೊಳಿಸುವ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

**(07) ಸಿಬ್ಬಂದಿಗಳ ವೇತನ/ಸಹಾಯವಾಣಿ ಸಿಬ್ಬಂದಿಗಳ ವೇತನ/ಸೊಸೈಟಿಯ ಆಡಳಿತಾತ್ಮಕ ವೆಚ್ಚ:-**

ಸೊಸೈಟಿಯ ಕಾರ್ಯನಿರ್ವಹಣೆಗಾಗಿ ನೇಮಕಾತಿ ಮಾಡಿಕೊಂಡ ಸಿಬ್ಬಂದಿಗಳ ವೇತನ ಹಾಗೂ ಸಹಾಯವಾಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ, ಪ್ರಯಾಣ ವೆಚ್ಚ ಹಾಗೂ ಇತರೆ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ.150.00 ಲಕ್ಷಗಳನ್ನು ವಿನಿಯೋಗಿಸಲು ಉದ್ದೇಶಿಸಲಾಗಿದೆ.

**ಯೋಜನೆಗೆ ಆಯವ್ಯಯ:**

ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿಯು ಜಾರಿಗೊಳಿಸುತ್ತಿರುವ ಆಶಾದೀಪ ಯೋಜನೆಯ ಲೆಕ್ಕಶೀರ್ಷಿಕೆ: 2230-01-101-0-05 (059) ಯಡಿ 2021-22ನೇ ಸಾಲಿಗೆ ರೂ.100.00 ಲಕ್ಷಗಳನ್ನು ಹಂಚಿಕೆ ಮಾಡಿದ್ದು, ಹಿಂದಿನ ಸಾಲುಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಸಂಗ್ರಹಿತ ಬಡ್ಡಿ ರೂ.381.042 ಲಕ್ಷಗಳು ಸೇರಿದಂತೆ ಒಟ್ಟು ರೂ.481.042 ಲಕ್ಷಗಳ ಅನುದಾನವು ಯೋಜನೆಯ ಜಾರಿಗೆ ಲಭ್ಯವಿರುತ್ತದೆ. ಸದರಿ ಅನುದಾನವನ್ನು ಪ್ರಸಕ್ತ ಅಂದರೆ 2021-22ನೇ ಸಾಲಿಗೆ ಈ ಕೆಳಕಂಡಂತೆ ಬಳಸಿಕೊಳ್ಳಲು ಕ್ರಿಯಾ ಯೋಜನೆ ರೂಪಿಸಲಾಗಿದೆ.

ಮೇಲ್ಕಂಡ ವಿವರಣೆಗಳ ಹಿನ್ನೆಲೆಯಲ್ಲಿ ವಿವಿಧ ಉದ್ದೇಶಕ್ಕಾಗಿ ಬಳಸಿಕೊಳ್ಳಬಹುದಾದ ಅನುದಾನವು ಈ ಕೆಳಗಿನಂತಿದೆ:

| ಕ್ರಸಂ. | ಉದ್ದೇಶ | ಗುರಿ | ಪ್ರಸ್ತಾವಿತ ಮೊತ್ತ (ಲಕ್ಷಗಳಲ್ಲಿ) |
|---|---|---|---|
| 01. | ಮಾಲೀಕರು ಪಾವತಿಸುವ ಇ.ಎಸ್.ಐ. ಮತ್ತು ಇ.ಪಿ.ಎಫ್ ವಂತಿಕೆ ಮರುಪಾವತಿ. | 150 | 54.00 |
| 02. | ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳ ಶಿಷ್ಯವೇತನ ಮರುಪಾವತಿ. | 220 | 132.00 |
| 03. | ಅಪ್ರೆಂಟಿಸ್ ತರಬೇತಿ ನಂತರ ಅದೇ ಅಭ್ಯರ್ಥಿಗಳನ್ನು ಖಾಯಂ ಆಗಿ ನೇಮಕ ಮಾಡಿದಲ್ಲಿ ವೇತನ ಮರುಪಾವತಿ. | 15 | 12.60 |
| 04. | ತಂತ್ರಾಂಶ ಅಭಿವೃದ್ಧಿ ಹಾಗೂ ಸಾಮಾಜಿಕ ಜಾಲತಾಣ ನಿರ್ವಹಣೆ. | - | 40.00 |
| 05. | ಮಾಹಿತಿ, ಶಿಕ್ಷಣ ಹಾಗೂ ಸಂವಹನಾ ಚಟುವಟಿಕೆಗಳು ಸಂವಹನಾ ಚಟುವಟಿಕೆಗಳು. | - | 42.44 |
| 06. | ಮಹಿಳಾ ಅಭ್ಯರ್ಥಿಗಳಿಗೆ ವಿವಿಧ ಉದ್ಯೋಗಗಳ ಕುರಿತು ಮಾಹಿತಿ ಮತ್ತು ತರಬೇತಿ. | 200 | 50.00 |
| 07. | ಸಿಬ್ಬಂದಿಗಳ ವೇತನ/ಸಹಾಯವಾಣಿ ಸಿಬ್ಬಂದಿಗಳ ವೇತನ/ಸೊಸೈಟಿಯ ಆಡಳಿತಾತ್ಮಕ ವೆಚ್ಚ. | 12 | 150.00 |
| | **ಒಟ್ಟು ಮೊತ್ತ** | | **481.042** |

S. L.

ಜಂಟಿ ಕಾರ್ಮಿಕ ಆಯುಕ್ತರು ಮತ್ತು
ಸದಸ್ಯ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು
ಸಾಮಾಜಿಕ ಭದ್ರತಾ(ಆಶಾದೀಪ ಯೋಜನೆ) ಸೊಸೈಟಿ.
ಬೆಂಗಳೂರು.